674 (913) ಶ್ರೀ ಶಂಕರಲಿಂಗೇಗೌಡ ಹೆಚ್ ಎಸ್ (ಚಾಮರಾಜ) :– ವೈದ್ಯಕೀಯ ಶಿಕ್ಷಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

(ಅ) ಮೈಸೂರು ನಗರದಲ್ಲಿ ಕೆ ಆರ್ ಆಸ್ಪತ್ರೆ, ಚೆಲುವಾಂಬ ಆಸ್ಪತ್ರೆ ಮತ್ತು ಮಕ್ಕಳ ಆಸ್ಪತ್ರೆಗಳ ಅಭಿವೃದ್ಧಿಗಾಗಿ ಕಳೆದ ಮೂರು ವರ್ಷಗಳಲ್ಲಿ ಮಾಡಲಾದ ವೆಚ್ಚವೆಷ್ಟು ,

(ಆ) ಈ ಮೂರು ಆಸ್ಪತ್ರೆಗಳ ಸಮಗ್ರ ಅಭಿವೃದ್ಧಿಗಾಗಿ ಸರ್ಕಾರ ಹಮ್ಮಿಕೊಂಡಿರುವ ಯೋಜನೆಗಳೇನು (ವಿವರ ನೀಡುವುದು) ?

ಡಾ ವಿ ಎಸ್ ಆಚಾರ್ಯ (ವೈದ್ಯಕೀಯ ಶಿಕ್ಷಣ ಸಚಿವರು) –

(ಅ) ಕೆ ಆರ್ ಆಸ್ಪತ್ರೆಗೆ ಮಾಡಲಾದ ವೆಚ್ಚ ಒಟ್ಟು ರೂ 28,83,000/–

ಚೆಲುವಾಂಬ ಅಸ್ಪತ್ರೆಗೆ ಮಾಡಲಾದ ವೆಚ್ಚ

ಒಟ್ಟು ರೂ 1,47,34,183/–

ಕೆ ಆರ್ ಆಸ್ಪತ್ರೆ ಮೈಸೂರು

(ಆ) ಕಟ್ಟಡಗಳ ದುರಸ್ತಿ ಕಾಮಗಾರಿಗಾಗಿ ಬಿಡುಗಡೆ ಮಾಡಿರುವ ಅನುದಾನ

2004–05, 2005–06 ಮತ್ತು 2006–07ರಲ್ಲಿ ಅನುಕ್ರಮವಾಗಿ ರೂ 13 08 ಲಕ್ಷಗಳು, ರೂ 3 69 ಲಕ್ಷಗಳು ಮತ್ತು ರೂ 34 51 ಲಕ್ಷಗಳನ್ನು ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಬಿಡುಗಡೆ ಮಾಡಲಾಗಿದೆ

1) ಆಸ್ಪತ್ರೆಯ ಆವರಣದಲ್ಲಿ ರೋಗಿಗಳ ಅನುಕೂಲಕ್ಕಾಗಿ ನೆರಳುದಾರಿಗಳನ್ನು ನಿರ್ಮಿಸಲಾಗಿದೆ

2) ರೋಗಿಗಳ ಪೋಷಕರಿಗೆ ವಿವಿಧ ವಿಭಾಗಗಳಲ್ಲಿ ಕುಳಿತುಕೊಳ್ಳಲು ಆಸನಗಳನ್ನು ನಿರ್ಮಿಸಲಾಗಿದೆ

3) ಆಸ್ಪತ್ರೆ ಆವರಣದಲ್ಲಿ 5 ಸೋಲಾರ್ ಲ್ಯಾಂಪ್‌ಗಳನ್ನು ಅಳವಡಿಸಿದೆ

(ಆ) ಆಸ್ಪತ್ರೆಯ ಬಡರೋಗಿಗಳ ಚಿಕಿತ್ಸೆಗಾಗಿ ಅತ್ಯಾಧುನಿಕ ವೈದ್ಯಕೀಯ ಉಪಕರಣಗಳನ್ನು ಸರಬರಾಜು ಮಾಡಲಾಗಿದೆ ಉಪಕರಣಗಳ ಪಟ್ಟಿಯನ್ನು ಲಗತ್ತಿಸಲಾಗಿದೆ

(ಇ) ರೋಗಿಗಳ ಅನುಕೂಲಕ್ಕಾಗಿ ಅತ್ಯಾಧುನಿಕ ಪ್ರಯೋಗಾಲಯದ ಉಪಕರಣಗಳನ್ನು ನೀಡಿ 24 ಗಂಟೆಗಳ ಪ್ರಯೋಗಾಲಯವನ್ನು

ಪ್ರಾರಂಭಿಸುವುದಕ್ಕೋಸ್ಕರ ಈಗಾಗಲೇ ಸಿವಿಲ್ ಮತ್ತು ಎಲೆಕ್ಟ್ರಿಕಲ್ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ ಉಪಕರಣಗಳಿಗೆ ಟೆಂಡರ್ ಕರೆದು ಸರ್ಕಾರದಿಂದ ಅನುಮತಿ ಪಡಯಲಾಗಿದ್ದು ಸದ್ಯದಲ್ಲಿಯೇ ಉಪಕರಣಗಳನ್ನು ಸರಬರಾಜು ಮಾಡಲಾಗುವುದು

(ಈ) ಆಡಿಯೋ ಮೀಟರ್ ಉಪಕರಣ ಸೌಂಡ್ ಪ್ರೂಫ್ ರೂಂ ನಿರ್ಮಾಣ

ಚಿಲುವಾಂಬ ಆಸ್ಪತ್ರೆ, ಮೈಸೂರು

(ಅ) ಕಟ್ಟಡಗಳ ದುರಸ್ತಿ ಕಾಮಗಾರಿಗಾಗಿ ಬಿಡುಗಡೆ ಮಾಡಿರುವ ಅನುದಾನ 2004–05, 2005–06 ಮತ್ತು 2006–07 ರಲ್ಲಿ ಅನುಕ್ರಮವಾಗಿ ರೂ 6 00 ಲಕ್ಷಗಳು, ರೂ 0 18 ಲಕ್ಷಗಳು ಮತ್ತು ರೂ 10 26 ಲಕ್ಷಗಳನ್ನು ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಬಿಡುಗಡೆ ಮಾಡಲಾಗಿದೆ

(ಆ) ಆಸ್ಪತ್ರೆಗೆ ಆಗಾಗ ವಿದ್ಯುತ್ ತೊಂದರೆ ಆಗಬಾರದೆಂದು ಎಲ್ ಟಿ ಯಿಂದ ಹೆಚ್ ಟಿ ಪರಿವರ್ತನೆ ಮಾಡಿ ವಿದ್ಯುತ್ ಸಂಪರ್ಕ ಪಡೆಯಲಾಗಿದೆ

(ಇ) ಮಕ್ಕಳ ಆಟದ ಉದ್ಯಾನವನ್ನು ರೂ 70,000 ಗಳ ಖರ್ಚಿನೊಂದಿಗೆ ನಿರ್ಮಿಸಲಾಗಿದೆ

(ಈ) ರೂ 7 00 ಲಕ್ಷ ಖರ್ಚು ಮಾಡಿ ಅಡಿಗೆ ಮನೆಯನ್ನು ನವೀಕರಿಸಲಾಗಿದೆ ಮತ್ತು ದಾನಿಗಳಿಂದ ಊಟದ ಮನೆ ವ್ಯವಸ್ಥೆ, ನೀರಿನ ವ್ಯವಸ್ಥೆ, ಮಾಡಲಾಗಿದೆ

(ಉ) ಎರಡು ಮ್ಯಾನಿಫೋಲ್ಡ್ ರೂಮ್ಸ್ ವಿತ್ ಮೆಡಿಕಲ್ ಗ್ಯಾಸ್ ಪೈಪ್ ಲೈನ್ ಸಿಸ್ಟಂ – ಜೀವ ರಕ್ಷಕ ಆಮ್ಲಜನಕವನ್ನು ನಿರಂತರವಾಗಿ ಪೂರೈಸುವ ಸೌಲಭ್ಯ ಸುಮಾರು ರೂ 13 00 ಲಕ್ಷ ವೆಚ್ಚದಲ್ಲಿ ಒದಗಿಸಲಾಗಿದೆ

(ಊ) ಅಂದಾಜು ರೂ 50 00 ನವಜಾತ ತೀವ್ರ ಘಟಕ (ನಿಕೂ) ಮತ್ತು ಸುಸಜ್ಜಿತವಾದ (ಸ್ಟೇಟ್ ಆಫ್ ಆರ್ಟ್) ಘಟಕವನ್ನು ಪ್ರಾರಂಭಿಸಲಾಗಿದೆ ಇವರಿಂದ ನವಜಾತ ಶಿಶುಗಳ ಮರಣ ಶೇ 30 ರಷ್ಟು ಕಡಿಮೆಯಾಗಿದೆ

(ಋ) ಕೆ ಹೆಚ್ ಎಸ್ ಡಿ ವಿ ವತಿಯಿಂದ ರೂ 26 00 ಲಕ್ಷ ವೆಚ್ಚದಲ್ಲಿ ಶಸ್ತ್ರ ಚಿಕಿತ್ಸಾ ಕೊರಡಿ ನಿರ್ಮಿಸಲಾಗಿದೆ ಇದಕ್ಕೆ ಹೆಚ್ಚುವರಿಯಾಗಿ ರೂ 2 00 ಲಕ್ಷ ವೆಚ್ಚದಲ್ಲಿ ಎ ಸಿ ಅಳವಡಿಸಲಾಗಿದೆ ಇದಕ್ಕೆ ಪೂರಕವಾಗಿ ಸಲಕರಣೆಗಳು ಸರಬರಾಜು ಆಗಿದೆ

(ಎ) ಲೇಬರ್ ವಾರ್ಡಿನ ರೋಗಿಯ ಕಡೆಯವರಿಗೆ ರೋಗಿಯ ಬಗ್ಗೆ ಅಧಿಕೃತ ಮಾಹಿತಿ ನೀಡಲು ಪಬ್ಲಿಕ್ ಅಡ್ರಸ್ ಸಿಸ್ಟಂ ಸೌಲಭ್ಯ ಅಳವಡಿಸಲಾಗಿದೆ

(ಏ) ಇಲಾಖಾ ಅನುದಾನ ಮತ್ತು ಆರೋಗ್ಯ ರಕ್ಷಾ ಸಮಿತಿ ಅನುದಾನದಲ್ಲಿ ಉಪಯುಕ್ತ ಉಪಕರಣಗಳನ್ನು ಪಡೆಯಲಾಗಿದೆ–ಪಟ್ಟಿ ಲಗತ್ತಿಸಿದೆ

(ಐ) ವಿವಿಧ ವಿಭಾಗಗಳ ನಿರ್ವಹಣೆ ಗಣಕೀಕೃತಗೊಳಿಸುತ್ತಿದೆ

675 (914) ಶ್ರೀ ಶಂಕರಲಿಂಗೇಗೌಡ ಹೆಚ್ ಎಸ್ (ಚಾಮರಾಜ) – ವೈದ್ಯಕೀಯ ಶಿಕ್ಷಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

(ಅ) ಮಾದಿಗ ಜನಾಂಗದವರ ಸಂಘಟನೆಗಳ ಬೇಡಿಕೆಗಳ ವಿವರ ಒದಗಿಸುವುದು ,

ಸರ್ಕಾರಿ ಬೇಡಿಕೆಗಳ ಬಗ್ಗೆ ಸರ್ಕಾರ ಈವರೆಗೆ ಕೈಗೊಂಡಿರುವ ಕ್ರಮವೇನು ;

(ಆ) ಒಳಮೀಸಲಾತಿ ವಿಚಾರದಲ್ಲಿ ರಚಿಸಲಾಗಿದ್ದ ಸಮಿತಿಯು ಸರ್ಕಾರಕ್ಕೆ ವರದಿ ಸಲ್ಲಿಸಿದೆಯೇ ?

(ಇ) ಸಲ್ಲಿಸಿದ್ದಲ್ಲಿ, ವರದಿಯಲ್ಲಿ ವಿವರ ನೀಡುವುದು, ಸಲ್ಲಿಸದಿದ್ದಲ್ಲಿ ಸಮಿತಿಗಿರುವ ಕಾಲಮಿತಿ ಎಷ್ಟು ?

ಶ್ರೀ ಬಾಲಚಂದ್ರ ಜಾರಕಿಹೋಳಿ (ಸಮಾಜ ಕಲ್ಯಾಣ ಸಚಿವರು) –

(ಅ) ಮಾದಿಗ ಜನಾಂಗದ ಸಂಘಟನೆಗಳ ಬೇಡಿಕೆಗಳ ವಿವರ ಈ ಕೆಳಕಂಡಂತಿದೆ

(1) ಪರಿಶಿಷ್ಟ ಜಾತಿಯ ಜನಗಣತಿ ನಡೆಯಬೇಕು (2) ಪರಿಶಿಷ್ಟರ ಆಯಾ ಜಾತಿಯ ಜನಸಂಖ್ಯೆಗನುಣವಾಗಿ ಶೇ 15 ರ ಮೀಸಲಾತಿ ಹಂಚಿಕೆಯಾಗಬೇಕು (3) ಸರ್ಕಾರಿ ಸಾಲ ಸೌಲಭ್ಯಗಳಿಗೆ ಸಂಬಂಧಿಸಿದಂತೆ ಆಯಾ ಇಲಾಖಾವಾರು ಬಿಡುಗಡೆಯಾದ ಹಣದಲ್ಲಿ ಜನಸಂಖ್ಯೆಗನುಗುಣವಾಗಿ ಸಾಲ ಸೌಲಭ್ಯ ನೀಡಬೇಕು (4) ರಾಜ್ಯ ಸರ್ಕಾರವು ನೀಡಿರುವ ಎಲ್ಲಾ ಸೌಲಭ್ಯಗಳು ಪರಿಶಿಷ್ಟ ಜಾತಿಯ ಎಲ್ಲಾ ಕೋಮು, ಜಾತಿ, ವರ್ಗಗಳಿಗೆ ಸಮರ್ಪಕವಾಗಿ ತಲುಪಬೇಕು ಅದರಲ್ಲಿ ಮಾದಿಗ ಜನಾಂಗಕ್ಕೆ ಶೇ 80 ರಷ್ಟು ಮೀಸಲಾತಿ ಒದಗಬೇಕು (5) ರಾಜ್ಯದಲ್ಲಿ ಮಾದಿಗರ ಅಭಿವೃದ್ಧಿಗಾಗಿ ಡಾ॥ ಜಗಜೀವನರಾಂರವರ ಹೆಸರಿನಲ್ಲಿ ಅಭಿವೃದ್ಧಿ ನಿಗಮ ಸ್ಥಾಪಿಸಬೇಕು (6) ಇನ್ನು ಮುಂದೆ ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿ ಬೇರೆ ಯಾವುದೇ ಜಾತಿಯನ್ನು ಸೇರಿಸಬಾರದು (7) ಆಂಧ್ರ ಸರಕಾರದ ಮಾದರಿಯಲ್ಲಿ ಜನಸಂಖ್ಯಾಧಾರಿತ ಮೀಸಲಾತಿ ಮಾಡುವುದು (8) ಖಾಸಗಿ ಕ್ಷೇತ್ರದಲ್ಲಿ ಜನಸಂಖ್ಯಾಧಾರಿತ ಮೀಸಲಾತಿಯನ್ನು ಜಾರಿಗೊಳಿಸುವುದು (9) ಒಳಮೀಸಲಾತಿಯನ್ನು ಎ,ಬಿ,ಸಿ,ಡಿ ಆಧಾರಿತ ವರ್ಗೀಕರಣ ಮಾಡುವುದು (10) ಮಾದಿಗ ಜನಾಂಗದ ಅಭಿವೃದ್ಧಿಗಾಗಿ ಪ್ರತ್ಯೇಕ ಪ್ರಾಧಿಕಾರ ನಿರ್ಮಿಸುವುದು (11) ಮಾದಿಗ